ಹಿತ್ತಾಳೆಯ ತಾಂಬಾಣ. ರಾಜಸ್ಥಾನಿ ರೀತಿಯಲ್ಲಿ ತಯಾರಿಸಿದ ಸ್ವಾದಿಷ್ಟ ಭೋಜನ, ಸಿಹಿ ತಿಂಡಿಗಳು. ಟೀವಿಯಿಲ್ಲ. ಹಳೆಯ ಕಾಲದ ಹ್ಯಾಂಡಲ್ ತಿರುಗಿಸುವ, ಗ್ರಾಮಾಫೋನಿನಲ್ಲಿ ರಾಜಸ್ಥಾನದ ಜನಪದ ಹಾಡುಗಳು ಮೆಲುದನಿಯಲ್ಲಿ ಹೊಮ್ಮುತ್ತಾ, ಕಾಲ ಹಿಮ್ಮುಖವಾಗಿ ಚಲಿಸುವಂತಿತ್ತು. ಒಂದು ದಿನ ಗೊತ್ತಾಗದೆ ಕಳೆಯಿತು. ರಾತ್ರಿ ಮಲಗುವ ಹೊತ್ತಿಗೆ ರೆಸಾರ್ಟಿನ ಮ್ಯಾನೇಜರು ಅವರನ್ನು ಭೇಟಿಯಾಗಲು ಬಂದ. ಎಲ್ಲಾ ಸೌಕರ್ಯ ಇದೆಯೆ ಅಂತ ಸೌಜನ್ಯದಿಂದ ವಿಚಾರಿಸಿಕೊಂಡ. ನಂತರ, ಅಲ್ಲಿಂದ ಒಂದು ಕಿಲೋಮೀಟರು ದೂರದೊಂದು ಸ್ಥಳದಲ್ಲಿ ರಾಧಾಕೃಷ್ಣನ ಚಿಕ್ಕ ದೇವಾಲಯವನ್ನು ಹೊಸದಾಗಿ ನಿರ್ಮಿಸಿದ್ದಾರೆಂದೂ, ಮರುದಿನ ಪ್ರಾತಃಕಾಲ ಅದರ ಉದ್ಘಾಟನೆಯಿದೆಯೆಂತಲೂ, ಇಲ್ಲಿರುವ ಎಲ್ಲರನ್ನೂ ಪ್ರೀತಿಯಿಂದ ಕರೆದಿದ್ದಾರೆ, ಎಲ್ಲರೂ ಹೋಗೋಣ, ತಾನು ಕರೆದೊಯ್ಯಲು ಬರುತ್ತೇನೆ ಅಂತ ಒತ್ತಾಯಪೂರ್ವಕ ಹೇಳಿಹೋದ.

ನಸುಕಿನಲ್ಲೆ ಸ್ನಾನ ಮಾಡಿ ಎಲ್ಲಾ ತಯಾರಾದರು. ಹೇಳಿದಂತೆ ಮ್ಯಾನೇಜರ್ ಕರೆದೊಯ್ಯಲು ಬಂದ. ಐದಾರು ಮೆಟಡರುಗಳು ತಯಾರಾಗಿ ನಿಂತಿದ್ದವು. ರೆಸಾರ್ಟಿನಲ್ಲಿರುವವರನ್ನೆಲ್ಲ ಕುಳ್ಳಿರಿಸಿಕೊಂಡು ಹೊರಟವು. ಇಳಿಜಾರು ತಿರುವುಗಳಲ್ಲಿ ಹತ್ತು ನಿಮಿಷ ಚಲಿಸಿ ಒಂದು ಕಡೆ ನಿಂತವು. ಇಳಿದವರ ಕಣ್ಣಿಗೆ ಎದುರು ಚಿಕ್ಕ ಗುಡ್ಡದ ಮೇಲೆ, ಸಂಗಮವರಿ ಕಲ್ಲಿನಲ್ಲಿ ನಿರ್ಮಿಸಿದ ಗುಡಿ ಈಗಷ್ಟೆ ಶಿಖರದ ಮೇಲೆ ಬಿದ್ದ ಹಿಮದಂತೆ ಹೊಳೆಯಿತು.

***

ಮಧ್ಯರಾತ್ರಿ ದಾಟಿತ್ತು. ದೇಶ್ಪಂತರು ಹಳೆಯ ಕಡತಗಳನ್ನು ಹುಡುಕಿ ತೆಗೆದು, ನೋಡುವ ಕೆಲಸದಲ್ಲಿ ತೊಡಗಿದ್ದರು. ಈ ಪುರಾತನ ಭವನಕ್ಕೆ ಸಂಬಂಧಿಸಿದ ಯಾವುದಾದರೂ ದಾಖಲೆಯಲ್ಲಿ ತಮಗೆ ಅನುಕೂಲವಾಗುವಂತ ಅಂಶ ಸಿಗಬಹುದೇನೋ ಅನ್ನುವ ಆಸೆಯಲ್ಲಿ ಪ್ರಯತ್ನ ನಡೆಸಿದ್ದರು. ಎರಡೆರಡು ಸಾರಿ ಬಕುಲಾ ಬಂದು, ನಿದ್ದೆಗೆಟ್ಟರೆ ಆರೋಗ್ಯ ಕೆಟ್ಟೀತು, ಮಲಗಿ ಅಂತ ಒತ್ತಾಯಿಸಿ ಹೋಗಿದ್ದರು. ಆಸೆಯಿಂದ ಹುಡುಕಾಡುತ್ತಿದ್ದ ಅವರೆದುರು ಕಡತಗಳ ರಾಶಿ ವಿಸ್ತರಿಸುತ್ತ ಹೋಗಿತ್ತು. ಹಳೆಯ ಅಕ್ಷರಗಳನ್ನು ಪರಿಶೀಲಿಸುವುದರಲ್ಲಿ ಕಣ್ಣು ಸೋತು, ಕುತ್ತಿಗೆಯಲ್ಲಿ ನೋವಾಗಿ, ಎರಡು ಸಾರಿ ಸುಧಾರಿಸಿಕೊಂಡು ಮತ್ತೆ ಮುಂದುವರಿಸಿದ್ದರು. ಬಗೆದಷ್ಟೂ ಏನೇನೋ ದಾಖಲೆ ಹೊರಬರುತ್ತಲೆ ಇತ್ತು. ಆದರೆ ಆಶಾದಾಯಕವಾದ್ದು ಯಾವುದೂ ಕಾಣಲಿಲ್ಲ. ಇದು ಗುಡ್ಡಕ್ಕೆ ಕಲ್ಲು ಹೊತ್ತಂತೆ, ಇನ್ನು ಸಾಕು ಅನ್ನುವ ಬೇಸರದಿಂದ ಕಡತಗಳನ್ನು ಪಕ್ಕಕ್ಕೆ ಸರಿಸಿ, ಕೈಯೂರಿ ಏಳಬೇಕು ಅನ್ನುವಾಗ, ಒಂದು ಚಿಕ್ಕ ಕಟ್ಟು ಕಾಣಿಸಿತು. ನಾಕಾರು ತಾಳೆಗರಿಗಳನ್ನು ಸೇರಿಸಿ ಕಟ್ಟಿದಂತಿತ್ತು. ಅರಿವೆಯ ಮೇಲೆ ಎಂತದೋ ಮೇಣದಂತದನ್ನಿಟ್ಟು ಸೀಲು ಮಾಡಿದ ಹಾಗೆ ಕಂಡಿತು. ಅದರಲ್ಲಿ ಅವರಿಗೆ ಬೇಕಾದ್ದು ಇರುವ ಸಂಭವವಿರಲಿಲ್ಲ. ಅದು ಮತ್ತಾವುದೋ ಹಳೆಯ ಕಾಗದಗಳ ಜೊತೆ ಒಟ್ಟಿದ್ದಿರಬಹುದು, ಕಡತಗಳನ್ನು ಅತ್ತಿತ್ತ ಮಾಡುವಾಗ ಹೊರಬಿದ್ದಿರಬೇಕೆನಿಸಿತು. ಆದರೆ, ಸೀಲು ಮಾಡುವಂತದ್ದು ಅದೇನು ಅನ್ನುವ ಕುತೂಹಲಕ್ಕೆ ಅದನ್ನು ಕೈಗೆತ್ತಿಕೊಂಡರು. ಕತ್ತರಿಯಿಂದ ನಿಧಾನವಾಗಿ, ಲಡ್ಡಾದ ಬಟ್ಟೆಯನ್ನು ಕತ್ತರಿಸಿದರು. ಹಳೆ ತಾಳೇಗರಿ ಜೀರ್ಣವಾಗಿ ಮುರಿಯುವಂತಿತ್ತು. ನಾಜೂಕಾಗಿ ಒಂದು ಗರಿಯನ್ನು ತೆಗೆದು ನೋಡಿದರು. ಹಳಗನ್ನಡದಲ್ಲಿ ಬರೆದಿತ್ತು. ಮೋಡಿ ಲಿಪಿ, ಹಳಗನ್ನಡ ಅಭ್ಯಾಸ ಮಾಡಿದವರು ಅವರು. ಲಿಪಿಯಿಂದ, ಅದು ಸಾವಿರ ವರ್ಷಗಳಿಗೂ ಮೊದಲಿನದೆಂದು ತರ್ಕಿಸಿದವರಿಗೆ ಕುತೂಹಲ ಹೆಚ್ಚಿತು. ಪ್ರಯತ್ನ ಹಾಕಿ ಶಬ್ದಗಳನ್ನು ಅರ್ಥೈಸಲು ತೊಡಗಿದಂತೆ ಯಾವುದೋ ಅಶಂಕೆಯಿಂದ ಎದೆ ಡವಡವ ಹೊಡೆದುಕೊಳ್ಳಲು ತೊಡಗಿತು!

***

ಗುಡ್ಡದ ಮೇಲೆ ದೊಡ್ಡದೊಡ್ಡ ಶಾಮಿಯಾನ ಹಾಕಿದ್ದು ನೋಡಿದರೆ, ಸಾವಿರಾರು ಜನರಿಗೆ ವ್ಯವಸ್ಥೆಯಾದಂತೆ ಕಂಡಿತು. ಮಂತ್ರಘೋಷ ಗಾಳಿಯೊಂದಿಗೆ ಗುಡ್ಡದಿಂದಿಳಿದು ಬರುತ್ತಿತ್ತು. ಎಲ್ಲ ಮೆಟ್ಟಿಲುಗಳನ್ನು ಹತ್ತಿ ಮಂದಿರದೆದುರು ಬಂದರು. ಇಡಿಯ ಮಂದಿರ, ಬುನಾದಿಯಿಂದ ಹಿಡಿದು ಕಲಶದ ತನಕ, ಬಿಳಿಯ ಅಮೃತಶಿಲೆಯಲ್ಲಿ ಕಟ್ಟಿದ್ದಾಗಿತ್ತು. ಮೇಲೆ ಹಿತ್ತಾಳೆಯ ಕಲಶ ಲಕಲಕಿಸುತ್ತಿತ್ತು. ಮ್ಯಾನೇಜರು ಎಲ್ಲರನ್ನು ಮಂದಿರದ ಒಳಪ್ರಾಂಗಣಕ್ಕೆ ಕರೆದೊಯ್ದ. ಅಲ್ಲಾಗಲೆ ಸುತ್ತಲ ಹಳ್ಳಿಯ ಜನ, ಹೊರಗಡೆಯಿಂದ ಆಮಂತ್ರಿತರಾದ ಗಣ್ಯರೆಲ್ಲ ಕುಳಿತಿದ್ದರು. ರಾಧೆ ಮತ್ತು ಕೃಷ್ಣ ಜೋಡಿಯಲ್ಲಿದ್ದ ಮೂರ್ತಿಯ ಪ್ರತಿಷ್ಠಾಪನೆ ಹಿಂದಿನ ದಿನವೆ ಆಗಿತ್ತು. ಇವತ್ತು ಹೋಮವಿತ್ತು. ದೊಡ್ಡ ಹೋಮಕುಂಡದ ಸುತ್ತ ಋತ್ವಿಜರು ಕುಳಿತು ಮಂತ್ರಘೋಷ ಮಾಡುತ್ತಾ, ಆಹುತಿ ಹಾಕುತ್ತಿದ್ದರು. ತುಪ್ಪ ಮತ್ತು ಸಮಿತ್ತಿನ ಪರಿಮಳ ಅಲ್ಲೆಲ್ಲ ಪಸರಿಸಿತ್ತು. ಕುಂಡದಿಂದ ಸ್ವಲ್ಪವೆ ದೂರ, ಆದರೆ ಉಳಿದವರಿಂದ ಪ್ರತ್ಯೇಕವಾಗಿ ಕುಳಿತ ಮಹಿಳೆಯ ಕಡೆ ಇವರೆಲ್ಲರ ಲಕ್ಷ್ಯ ಹೋಯಿತು. ನಲವತ್ತರ ಆಸುಪಾಸಿರಬಹುದು. ಹಾಲು ಬಿಳುಪು ಬಣ್ಣ. ಬೆಲೆಬಾಳುವ ರೇಶಿಮೆಯ ಉಡುಪಿನಲ್ಲಿದ್ದವಳ ಮೈಮೇಲೆ ಚಕಚಕನೆ ಹೊಳೆಯುವ ವಜ್ರಾಭರಣ ತುಂಬಿಕೊಂಡಿತ್ತು. ಆದರೆ, ಮುಖ ನೋಡಿದ ತಕ್ಷಣ ಒಂದು ಗೌರವ ತಾನೆತಾನಾಗಿ ಹುಟ್ಟಬೇಕು, ಅಂತಹ ಭಕ್ತಿ ಮತ್ತು ಸಮರ್ಪಣೆಯಿಂದ ತೊಯ್ದ ಶಾಂತಭಾವ ಮುಖದಲ್ಲಿತ್ತು. 'ಅವರು ಸಾಧನಾ ಬೆಹನ್ಜಾ, ದೊಡ್ಡ ಉದ್ಯಮ ಸಮೂಹದ ಒಡೆಯನ ಹೆಂಡತಿ. ಇವರು ಹೊರಟರೆ, ಇವರಿಗಾಗಿಯೆ ಹೆಲಿಕಾಪ್ಟರು ತಯಾರಿರತದೆ. ಆದರೆ, ಸ್ವಲ್ಪವೂ ಅಹಂ ಇಲ್ಲ. ದೇಶದ ಮೂಲೆಮೂಲೆಯಲ್ಲಿ ಒಂದಲ್ಲ ಒಂದು ಧಾರ್ಮಿಕ ಕೆಲಸದಲ್ಲಿ ಹಣ ವಿನಿಯೋಗಿಸ್ತಾನೆ ಇರತಾರೆ. ಇವರ ಪುಣ್ಯದ ಬಲವೆ ಇವರ ಗಂಡನ ಯಶಸ್ಸಿಗೆ ಕಾರಣ ಅಂತಾರೆ.' ಮೆಲುದನಿಯಲ್ಲಿ ವಿವರಿಸಿದ ಮ್ಯಾನೇಜರ್. ಅವನ ಮುಖದಲ್ಲಿ ಆ ಮಹಿಳೆಯ ಬಗೆಗಿನ ಆದರ ತುಳುಕುತ್ತಿತ್ತು.

'ಗಂಡನೂ ಇಲ್ಲಿದಾರ?' ಯಾರೋ ಕೇಳಿದರು. 'ಅವರಿಗೆಲ್ಲಿ ಪುರುಸೊತ್ತು? ನಿಮಿಷಕ್ಕೆ ಕೋಟಿ ರೂಪಾಯಿ ಆದಾಯ ಅಕೌಂಟಿಗೆ ಜಮಾ ಆಗತದೆ ಅಂತಾರೆ! ಅಂತಹ ಬಿಸಿನೆಸ್ಸಿನ ನಿರ್ವಹಣೆ ಅಂದ್ರೆ, ಆಯಸ್ಸಿಡಿ ವಿಮಾನದಲ್ಲಿ ಹಾರಡತಾನೆ ಇರಬೇಕು ಮತ್ತೆ!' ತನ್ನ ತಿಳಿವಳಿಕೆಗೆ ಹೆಮ್ಮೆಯ ನಗು ಬೀರಿದ ಆತ. 'ಅವರ ಉಡುಪು, ಒಡವೆ ನೋಡಿದ್ರೇ ದೊಡ್ಡವರು ಅಂತ ಗೊತ್ತಾಗತದೆ...' ಮಹಿಳೆಯೊಬ್ಬಳು ಪ್ರಶಂಸಿಸಿದಳು. 'ಅದವರ ಗಂಡನ ಒತ್ತಾಯಕ್ಕೆ. ಗಂಡನ ಸ್ಟೇಟಸ್ಸು ಕಾಯುವುದೂ ಹೆಂಡತಿಯ ಕರ್ತವ್ಯ. ಅದಕ್ಕೆ ಧರಿಸಲೇಬೇಕು. ಇವತ್ತಂತು ಪೂಜೆಯಲ್ವಾ? ರೇಷ್ಮೆ, ನಗನಟ್ಟು ಹಾಕಿರಲೇಬೇಕು ಯಾವುದೇ ಭಾರತೀಯ ಮಹಿಳೆ...'

ಶಂಖನಾದ, ತಾಳ ಜಾಗಟೆಗಳ ಸದ್ದು ಅಲ್ಲೆಲ್ಲ ಅಲೆಯೆಬ್ಬಿಸಿತು. ಎಲ್ಲರೂ ಗರ್ಭಗುಡಿಯತ್ತ ಮುಖ ಮಾಡಿ ಕೈಮುಗಿದು ನಿಂತರು. ಮಂಗಳಾರತಿಯ ನಂತರ, ಎಲ್ಲ ಅಲ್ಲಲ್ಲಿ ಕುಳಿತರು. ರೆಸಾರ್ಟಿನವರು ಒಂದು ಕಡೆ ಗುಂಪಾಗಿ ಕುರ್ಚಿಗಳ ಮೇಲೆ ಕುಳಿತಿದ್ದರು. ಮ್ಯಾನೇಜರ್ ಬಂದವ, ಮೇಡಂ ಸ್ವತಃ ತಮ್ಮ ಕೈಯಿಂದ ಪ್ರಸಾದ ಕೊಡತಾರಂತೆ. ಬನ್ನಿ, ಸಾಲು ಉದ್ದವಾಗೋ ಮೊದಲು ನಾವು ತಗಳೋಣ ಅಂದ.

ಸಾಧನಾ ಬೆಹನ್ ಕುರ್ಚಿಯ ಮೇಲೆ ಆಸೀನರಾಗಿ ಎಲ್ಲರಿಗೂ ಪ್ರಸಾದ ಮತ್ತು ರಾಧಾಕೃಷ್ಣನ ಮೂರ್ತಿಯನ್ನು ಕೊಡುತ್ತಿದ್ದರು. ಸ್ವೀಕರಿಸುವವರು ತಮ್ಮ ಹೆಸರು ಹೇಳಿದಂತೆ, ರಾಧಾಕೃಷ್ಣ ಒಳ್ಳೇದು ಮಾಡಲಿ ಅಂತ ಹೇಳಿ ಮುಂದೆ ಕಳಿಸುತ್ತಿದ್ದರು. ಪಾಂಡುರಂಗ ದೇಶ್ಪಂತ ಅಂತ ಪರಿಚಯ ಹೇಳಿಕೊಂಡಾಗ, ಮೇಡಂ ಪಕ್ಕ ನಿಂತಿದ್ದ ಆಪ್ತ ಸಹಾಯಕ ಅವರತ್ತ ಬಾಗಿ ಏನೋ ಹೇಳಿದ. ಮೇಡಂ ತಲೆಯೆತ್ತಿ ಮತ್ತೊಮ್ಮೆ ಇವರ ಮುಖ ನೋಡಿದರು. ಅದಾದ ನಂತರ, ಬಂದವರಿಗೆಲ್ಲ ಊಟದ ವ್ಯವಸ್ಥೆಯಿತ್ತು. ಊಟ ಮಾಡುತ್ತಿದ್ದಾಗ ಪಂಕ್ತಿಯಲ್ಲಿ ಹುಡುಕಿಕೊಂಡು ಬಂದ ಆಪ್ತ ಸಹಾಯಕ, ಪಾಂಡುರಂಗ ಶಾಂತಾರಾಮರತ್ತ ಬಾಗಿ ಪಿಸುದನಿಯಲ್ಲಿ, 'ಊಟವಾದ ಮೇಲೆ ಅಲ್ಲಿ ಬನ್ನಿ. ಮೇಡಂ ನಿಮ್ಮನ್ನ ಕಾಣಬಯಸಿದಾರೆ. ರೆಸಾರ್ಟ್ ಮ್ಯಾನೇಜರಿಗೂ ಹೇಳಿದ್ದೇನೆ. ನೀವು ಬರೋವರೆಗೆ ಕಾಯತಾರೆ' ಅಂದವ ಮಂದಿರದ ಕಾರ್ಯಾಲಯದ ಕೋಣೆಯತ್ತ ಕೈ ತೋರಿಸಿದ.

ಊಟ ಮುಗಿಸಿದ ಎರಡೂ ಕುಟುಂಬದವರು ಕೋಣೆಗೆ ಹೋದರು. ಅಲ್ಲಿ ಕುಳಿತಿದ್ದ ಸಾಧನಾ ಬೆಹನ್ ಮಂದಹಾಸ ಬೀರಿ, ಕುಳಿತುಕೊಳ್ಳುವಂತೆ ಸನ್ನೆ ಮಾಡಿದರು. 'ದೇಶ್ಪಂತರ ಮಕ್ಕಳಲ್ಲವೇ ನೀವು?' ಅಂತ ಕೇಳಿದಾಗ ಇವರಿಗೆಲ್ಲ ಅಚ್ಚರಿಯಾಯಿತು. 'ನೀವಿಲ್ಲಿ ಬಂದದ್ದು ಖುಷಿಯಾಯಿತು. ನಿಮ್ಮ ಪೂರ್ವಜರ ಪುಣ್ಯದ ಆಸ್ತಿಯನ್ನು ನಮ್ಮ ಉದ್ಯಮಕ್ಕೆ ಕೊಡತಿದೀರಿ. ಆ ಕೃಷ್ಣ ರಾಧೆಯರನ್ನು ನಮಿಸಿ, ಒಳ್ಳೇ ಮನಸಿನಲ್ಲಿ ಕೊಡಿ. ನಮಗು ನಿಮಗು ಶ್ರೇಯಸ್ಸಾಗಲಿ' ಅಂದರು. ಆಪ್ತ ಸಹಾಯಕ ಎರಡು ರಟ್ಟಿನ ಪೆಟ್ಟಿಗೆಗಳನ್ನು ತಂದ. ಎದ್ದುಬಂದು ತಮ್ಮ ಕೈಯಾರ, ಶಾಂತಾರಾಮನ ಮತ್ತು ಪಾಂಡುರಂಗನ ಹೆಂಡತಿಗೆ